ವಿಶ್ವವಾಣಿ
ವಿ+ Be Positive
06.08.2018 ಸೋಮವಾರ @vishwavaninews







ಆಧುನಿಕತೆಗೆ ಒಗ್ಗಿಕೊಂಡವರು ನಿಸರ್ಗದಿಂದ ದೂರವಾಗಿದ್ದರೂ, ಪರೋಕ್ಷವಾಗಿ ಬೇರಿಗಾಗಿ ಹುಡುಕಾಟ ನಡೆದೇ ಇದೆ. ಮಣ್ಣಿನ ವಾಸನೆಯೂ ತಗಲದಂತೆ ಬೇಲಿ ಕಟ್ಟಿಕೊಂಡವರಿಗೆ ಉಪ್ಪು, ಕಹಿಬೇವು, ಇದ್ದಿಲು ಮಿಶ್ರಿತವೆಂದು ಹೇಳಿಕೊಳ್ಳುವ ಕಂಪೆನಿಯ ಟೂತ್‌ಪೇಸ್ಟ್ ಬೇಕು. ಪಾತ್ರೆ ತೊಳೆಯಲು ಬೂದಿ, ನಿಂಬೆಯ ಡಿಶ್ ವಾಶ್ ಸೋಪು ಬೇಕು. ಹೀಗೆ ಮನಸ್ಸಿನ ಮೂಲೆಯಲ್ಲೆಲ್ಲೋ ನಮ್ಮ ಹಿರಿಯರು ಅನುಸರಿಸುತ್ತಿದ್ದ ಪದ್ಧತಿ ಶ್ರೇಷ್ಟವೆಂದು ತಿಳಿದಿದ್ದರೂ, ಅನುಸರಿಸಿದಲ್ಲಿ ಎಲ್ಲಿ ಈತ ಹಳೆಯ ಕಾಲಕ್ಕೆ ಜೋತುಬಿದ್ದವನೆಂದು ಹೇಳುತ್ತಾರೋ ಎಂಬ ಭಯ. ಈ ಮನೋಭಾವವನ್ನು ಹತ್ತಿಕ್ಕಿದ ಬೆಂಗಳೂರಿನ ಮೂವರು ಯುವಕರು ತಮ್ಮದೇ ವಿಧಾನದಲ್ಲಿ ನಿಸರ್ಗಕ್ಕೆ ಹತ್ತಿರವಾಗುವ ಪ್ರಯತ್ನದಲ್ಲಿದ್ದಾರೆ. ಕೈ ತುಂಬಾ ಸಂಬಳದ ಉದ್ಯೋಗ ತ್ಯಜಿಸಿ, ರಾಸಾಯನಿಕ ರಹಿತ ಎಣ್ಣೆ ತಯಾರಿಕಾ ಉದ್ಯಮದಲ್ಲಿ ಮುನ್ನುಡಿ ಬರೆಯಲು ಹೊರಟ ತ್ರಿಮೂರ್ತಿಗಳ ಸಾಧನೆಯ ಯಶೋಗಾಥೆ ಇಲ್ಲಿದೆ.

# ದೇಸಿರಿ Naturals

# ಸಹಜ ಕೃಷಿ ಕ್ಷೇತ್ರದಲ್ಲಿ ಅಡುಗೆ ಎಣ್ಣೆ ಕ್ರಾಂತಿ

**ಸಂಪರ್ಕ**
ಮಹೇಶ
+91 99723 74918
ನವೀನ್ ಕುಮಾರ್
+91 99458 11771
ಯೋಗೇಶ್ .ಎನ್
+91 96869 88887
www.desiri.in info@desiri.




• ಭವ್ಯ ಬೊಳ್ಳೂರು

ಹಚ್ಚ ಹಸಿರಿನ ಹೊಲ-ಗದ್ದೆ, ತೋಟಗಳಿಂದ ಮೈ ದುಂಬಿನಿಂತಿರುವ ಹಳ್ಳಿ. ಆ ಹಳ್ಳಿಯಲ್ಲೊಂದು ಗಾಣ. ಎತ್ತುಗಳು ಗಾಣ ಸುತ್ತುತ್ತಾ, ಎಣ್ಣೆ ತಯಾರಿಸುವ ಅಪೂರ್ವ ನೋಟ. ಸುತ್ತ ಮುತ್ತ ಗಾಣದಿಂದ ಹೊರಬಂದ ಎಣ್ಣೆಯ ಗಮ್ಮೆನ್ನುವ ಪರಿಮಳ. ಗಾಣದಿಂದ ತೆಗೆದ ನೈಸರ್ಗಿಕ ಎಣ್ಣೆ, ಅಡುಗೆಯ ಬಳಕೆಗೆ. ಉಳಿದ ಹಿಂಡಿ, ಹಸು, ಎಮ್ಮೆ, ಎತ್ತುಗಳ ಆಹಾರ. ದನಗಳ ಸೆಗಣಿ ಹೊಲ, ತೋಟಕ್ಕೆ ಗೊಬ್ಬರ. ನೈಸರ್ಗಿಕ ಗೊಬ್ಬರದಿಂದ ಬೆಳೆದ ಬೆಳೆಯೂ ಸಮೃದ್ಧ. ಮನೆಯಲ್ಲೇ ಸಾಕಿದ ಹಸುವಿನ ಹಾಲು, ಮೊಸರು, ಬೆಣ್ಣೆ ಉಂಡ ಮಕ್ಕಳ ಬೆಳವಣಿಗೆಯೂ ಆರೋಗ್ಯಕರ. ಹೀಗೆ ಕೆಲವೇ ವರ್ಷಗಳ ಹಿಂದೆ ಗ್ರಾಮೀಣ ಪರಿಸರದ ಬದುಕು ಒಂದಕ್ಕೊಂದು ಪೂರಕವಾಗಿರುತ್ತಿತ್ತು. ಆಧುನಿಕತೆಯ ಭರಾಟೆಗೆ ಸಿಲುಕಿ ಗಾಣದ ಎಣ್ಣೆ ಬಿಡಿ, ತಿನ್ನುವ ಅನ್ನ ಸಹ ಕಲಬೆರಕೆಯಾಗುತ್ತಿದೆ. ಕೃಷಿಕರು ಹೆಚ್ಚು ಬೆಳೆ ಪಡೆಯುವ ಉದ್ದೇಶದಿಂದ ರಾಸಾಯನಿಕಗಳಿಗೆ ಮೊರೆ ಹೋಗುತ್ತಿದ್ದಾರೆ. ಹೆಚ್ಚು ಲಾಭ ಪಡೆಯಬೇಕೆಂಬ ದುರಾಸೆಯಿಂದ ಉದ್ಯಮಿಗಳು ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಮಾರುಕಟ್ಟೆಗೆ ಪರಿಚಯಿಸುತ್ತಿದ್ದಾರೆ. ಕಡಿಮೆ ದರದಲ್ಲಿ ಸಿಗುತ್ತದೆ ಅನ್ನುವ ಒಂದೇ ಕಾರಣ, ಪೂರ್ವಾಪರ ತಿಳಿಯದ ಗ್ರಾಹಕರು, ತಮಗೇನೋ ಭಾರೀ ಉಪಕಾರವಾಯಿತೆಂಬಂತೆ ಅದಕ್ಕೇ ಮಾರುಹೋಗುತ್ತಿದ್ದಾರೆ. ಜಾಹಿರಾತು ಸಂಸ್ಥೆಗಳು ಜನರ ಮನೋಭಾವ ಅರಿತು ಅದಕ್ಕೆ ತಕ್ಕನಾಗಿ ಮಾರುಕಟ್ಟೆಯನ್ನು ವಿಸ್ತರಿಸುತ್ತಿವೆ. ಬೆಳೆಗಾರರು, ಉದ್ಯಮಿಗಳು, ಜಾಹಿರಾತುಗಳ ನಡುವೆ ಸಿಲುಕಿ ನಲುಗುತ್ತಿರುವುದು ಮಾತ್ರ ಗ್ರಾಹಕರು ಮತ್ತು ಅವರ ಆರೋಗ್ಯವೆನ್ನುವುದು ವಿಪರ್ಯಾಸದ ಸಂಗತಿ.



## ತ್ರಿಮೂರ್ತಿಗಳ ಅಪೂರ್ವ ಸಾಹಸ

ಹೀಗೆ ಆಹಾರ ತಯಾರಿಕಾ ಉದ್ಯಮದಲ್ಲಿ ನಡೆಯುತ್ತಿರುವ ಮೋಸ, ಜನರ ಆರೋಗ್ಯದ ಮೇಲಾಗುತ್ತಿರುವ ಪರಿಣಾಮವನ್ನು ಮನಗಂಡ ಬೆಂಗಳೂರಿನ ಮೂವರು ಯುವಕರು ಹೊಸದೊಂದು ಸಾಹಸಕ್ಕೆ ಕೈ ಹಾಕಿದ್ದಾರೆ. ಮಹೇಶ್, ಯೋಗೇಶ್ ಎನ್. ಮತ್ತು ನವೀನ್ ಕುಮಾರ್ ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಉತ್ತಮ ಹುದ್ದೆಯಲ್ಲಿದ್ದವರು. ಕೈತುಂಬಾ ಸಂಬಳ, ಸುಖದ ಪರಿಧಿಯೊಳಗಿರುವ ಜೀವನ ಈ ಎಲ್ಲವೂ ಇದ್ದರೂ ಈ ಮೂವರು ಸ್ನೇಹಿತರಿಗೂ ಮನಸ್ಸಿನ ಮೂಲೆಯಲ್ಲೆಲ್ಲೋ ಅತೃಪ್ತಿ, ಅಸಮಧಾನ. ಬೇರೇನನ್ನೋ ತಾವು ಸಾಧಿಸಬೇಕು, ನಾಲ್ಕು ಜನರಿಗೆ ತಮ್ಮ ಬಾಳು ನೆರಳು ನೀಡಬೇಕು, ಪ್ರಕೃತಿಗೂ ತಮ್ಮಿಂದಾದ ಕೊಡುಗೆ ನೀಡಬೇಕು ಅನ್ನುವ ಹಪಹಪಿಕೆ. ಹಿಂದಿನಿಂದಲೂ ಕೃಷಿ ಬಗ್ಗೆ ಆಸಕ್ತಿಯುಳ್ಳವರಿಗೆ ಕೃಷಿ ಸಂಬಂಧಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂಬ ಕನಸು ಇತ್ತು. ಇವನ್ನೆಲ್ಲಾ ಸಾಕಾ ರಗೊಳಿಸಲು, ತಮ್ಮ ಗಮ್ಯವನ್ನು ಕಂಡುಕೊಂಡಿದ್ದು ಎಣ್ಣೆ ತಯಾರಿ ಕೆಯ ಉದ್ಯಮದಲ್ಲಿ. ಹತ್ತರಲ್ಲಿ ಹನ್ನೊಂದಾಗದೆ, ತಮ್ಮದೇ ವಿಧಾನದಲ್ಲಿ ಹಳೆಯ ಸಾಂಪ್ರದಾಯಿಕ ಪದ್ಧತಿಯನ್ನೇ ಅಳವಡಿಸಿಕೊಳ್ಳಲು ನಿರ್ಧರಿಸಿದರು.

ಉದ್ಯೋಗದ ಜತೆ ಉದ್ಯಮ ಕಷ್ಟವೆನ್ನಿಸಿ, ಒಂದೇ ಮನಸ್ಥಿತಿಯುಳ್ಳ ಮೂವರೂ ತಮ್ಮ ವೃತ್ತಿಯನ್ನೂ ತ್ಯಜಿಸಿದರು. ಸಮಾನ ಮನಸ್ಥಿತಿ, ಅಭಿರುಚಿಯುಳ್ಳ ಮೂವರಿಗೂ ಎಲ್ಲಾ ಕೃತಕವೆನಿಸಿರುವ ಆಧುನಿಕ ಜಗತ್ತಿಗೆ ತಮ್ಮ ಕೈಯಿಂದಾದ ಸಹಾಯ ಮಾಡಬೇಕು ಎಂಬ ಕನಸಿತ್ತೇ ಹೊರತು ಮುಂದೆ ಏನು ಮಾಡಬೇಕೆಂಬುದು ತಿಳಿದಿರಲಿಲ್ಲ. ಅದಕ್ಕೋಸ್ಕರ ಕೆಲಸ ಬಿಟ್ಟ ಮೇಲೆ 10, 15ಸಾವಿರ ಕಿ.ಮೀ ಓಡಾಟವನ್ನೂ ಮಾಡಿದರು. ಕರ್ನಾಟಕ, ಆಂಧ್ರಪ್ರದೇಶ, ತಮಿಳ್ನಾಡುಗಳಿಗೆಲ್ಲಾ ಪ್ರಯಾಣಿಸಿದರು. ಆ ಪ್ರಯಾಣದ ಸಂದರ್ಭದಲ್ಲಿ ಜನರ ಆರೋಗ್ಯ, ತೆಗೆದುಕೊಳ್ಳುವ ಆಹಾರದಿಂದಲೇ ಹೇಗೆ ಹದೆಗೆಡುತ್ತಿದೆ ಎನ್ನುವುದೂ ಅವರ ಅರಿವಿಗೆ ಬಂತು. ಆಹಾರದಿಂದಲೇ ಹೊಸ ಹೊಸ ಕಾಯಿಲೆಗಳು ಶುರುವಾಗುತ್ತಿದೆ ಎನ್ನುವುದನ್ನು ಮನಗಂಡರು. ಈ ಎಲ್ಲಾ ಸಮಸ್ಯೆಗೂ ಮುಕ್ತಿ ಹಾಡಬೇಕೆಂಬ ಇವರೆಲ್ಲರ ಮನೋಭಿಲಾಷೆಯೇ 'ದೇಸಿರಿ ನ್ಯಾಚುರಲ್ಸ್' ಎನ್ನುವ ಮಹತ್ವಾಕಾಂಕ್ಷೆಯ ಸಂಸ್ಥೆಗೆ ಅಡಿಗಲ್ಲು ಹಾಕಿತ್ತು.

## ಗಾಣದ ಎಣ್ಣೆ ಪ್ರಯೋಜನ

- ಕೋಣೆಯ ಉಷ್ಣತೆಯಲ್ಲಿ ತಯಾರಾದ ಕಾರಣ, ಅಡುಗೆಯಲ್ಲೂ ಆಹ್ಲಾದಕರ ಪರಿಮಳ.
- ದೇಹಕ್ಕೆ ಅಗತ್ಯವಾದ ಕೊಲೆಸ್ಟ್ರಾಲ್‌ನ ಆದ ಹೆಚ್ಚಿನ ಸಾಂದ್ರತೆಯುಳ್ಳ ಲಿಪೋ ಪ್ರೊಟೀನ್‌ನ್ನು ಹೆಚ್ಚಿಸುತ್ತದೆ.
- ನೈಸರ್ಗಿಕವಾಗಿ ತಯಾರಾದ ಎಣ್ಣೆ ಚರ್ಮಕ್ಕೆ ಸಂಬಂಧಪಟ್ಟ ಸಮಸ್ಯೆ, ಗಂಟುನೋವು, ಸಂಧಿವಾತಗಳಿಗೆ ಪರಿಣಾಮಕಾರಿ.
- ತೆಂಗಿನ ಎಣ್ಣೆ ಕೂದಲ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ.
- ಕೊಬ್ಬರಿ ಎಣ್ಣೆಯನ್ನು ಒಣತ್ವಚೆಗೆ ಹಚ್ಚಿದಾಗ ತೇವಾಂಶ ಹೆಚ್ಚುತ್ತದೆ.
- ಸಾಸಿವೆ ಮತ್ತು ನೆಲಗಡಲೆ ಎಣ್ಣೆ ಅಲ್ಜೈಮರ್‌ನಿಂದ ಹೊರಬರಲು ಸಹಕಾರಿ.
- ದೇಸಿರಿ ಎಣ್ಣೆ ತಯಾರಿಸುವಾಗ ಪ್ಲಾಸ್ಟಿಕ್‌ನ ಬಳಕೆ ಇಲ್ಲದಿರುವುದರಿಂದ, ಕ್ಯಾನ್ಸರ್ ಕಾಯಿಲೆ ಹತ್ತಿರ ಸುಳಿಯದು.
- ತಯಾರಾದ ಹತ್ತೇ ದಿನದಲ್ಲಿ ಗ್ರಾಹಕರನ್ನು ತಲುಪುವುದರಿಂದ ತಾಜಾ ಆಗಿ ಇರುತ್ತದೆ.

## ಪರಿಸರ ಸ್ನೇಹಿ ಉತ್ಪನ್ನ

ಆರು ಎತ್ತುಗಳ ಮೂರು ಗಾಣವಿದ್ದು, ಎಲ್ಲೂ ವಿದ್ಯುತ್ ಬಳಸುವುದಿಲ್ಲ. ಪ್ಲಾಸ್ಟಿಕನ್ನೇ ಸ್ಪರ್ಶಿಸುವುದಿಲ್ಲ. ಗ್ರಾಮೀಣರ ನೈಸರ್ಗಿಕ ವಿಧಾನವನ್ನು ಅದೇ ರೀತಿ ಕಾಪಿಟ್ಟುಕೊಳ್ಳಲಾಗುತ್ತಿದೆ. ಮಾರುಕಟ್ಟೆಯಲ್ಲಿ ಮಾತ್ರ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಸಂಪ್ರದಾಯ ಹಾಗೂ ಆಧುನೀಕತೆ ಎರಡೂ ಜತೆಯಾದಾಗ, ತಯಾರಿ ಹಾಗೂ ಮಾರುಕಟ್ಟೆ ಎರಡೆರಡೂ ಪ್ರಯೋಜನವನ್ನೂ ಪಡೆದುಕೊಳ್ಳಬಹುದು. ಮಧ್ಯವರ್ತಿಯ ಕಾಟವೂ ಇರುವುದಿಲ್ಲವೆಂಬುದು ಅವರ ಅನುಭವ. ಪ್ರಕೃತಿ ಸ್ನೇಹಿಯಾಗಿರುವ ಈ ಉತ್ಪನ್ನದ ಇನ್ನೊಂದು ಪ್ಲಸ್ ಪಾಯಿಂಟ್ ರಾಸಾಯನಿಕ ಬಿಡುಗಡೆಯಾಗದ 'ಅಂಬೆರ್ ಕಲರ್ ಗ್ಲಾಸ್ ಬಾಟಲ್'.

ಮೂರು ಜನ ನೇರವಾಗಿ ಗ್ರಾಹಕರನ್ನು ಭೇಟಿಯಾಗುತ್ತಿದ್ದಾರೆ. ಮಾರ್ಕೆಟ್‌ನಲ್ಲಿ ಸಿಗುವ ಅಡುಗೆ ಎಣ್ಣೆಯ ಬೆಲೆ 120ರಿಂದ 150 ರೂ. ಅದರೆ ಗಾಣದಲ್ಲಿ ತಯಾರಾಗುವ ದೇಸಿರಿ ನ್ಯಾಚುರಲ್ಸ್‌ನ ಕಲಬೆರಕೆ ರಹಿತ, ನೈಸರ್ಗಿಕ ಎಣ್ಣೆಗೆ 325ರಿಂದ 350ರೂ. ಮಾರ್ಕೆಟಿಂಗ್‌ನಲ್ಲಿ ಇವರಿಗೆ ಎದುರಾಗುವ ಎರಡು ಪ್ರಶ್ನೆ, 'ಕಲಬೆರಕೆ ಇದೆಯೇ ಹಾಗೂ ಇಷ್ಟೊಂದು ದುಡ್ಡು ತೆಗೆದುಕೊಳ್ಳುತ್ತೀರಲ್ಲಾ? ಒಳ್ಳೆ ಲಾಭವನ್ನು ಇಟ್ಟುಕೊಂಡಿರುತ್ತೀರಿ' ಎಂಬುದು. ಇದಕ್ಕೆ ಇವರು ನೀಡುವ ಉತ್ತರವಿಷ್ಟೇ 'ಒಂದು ಕೆ.ಜಿ ಕಡಲೆಕಾಯಿಗೆ 90ರೂ. ಇದೆ. ಅದೇ ಒಂದು ಲೀ. ಎಣ್ಣೆ ತಯಾರಿಸಲು ಮೂರು ಕೆ.ಜಿ ಕಡಲೆಕಾಯಿ ಬೇಕು. ತಗಲುವ ಖರ್ಚು 270 ರೂ. ಮಾರಾಟ 120 ರೂ. ಯಾವುದನ್ನು ನಂಬುತ್ತೀರಿ'ಎನ್ನುವುದು. ರಾಸಾಯನಿಕದ ಬಳಕೆ, ಕಲಬೆರಕೆ, ರಿಫೈನಿಂಗ್ ಪ್ರೊಸೆಸ್ ತಯಾರಾಗುವ ರಿಫೈನ್ಡ್ ಎಣ್ಣೆಗಳ ಮೋಸದ ಬಗ್ಗೆ ಸಣ್ಣ ಒಂದು ಸಂಶಯವೂ ಬಹಳಷ್ಟು ಜನರಿಗೆ ಬರದಿರುವುದು ನಿಜಕ್ಕೂ ವಿಷಾದದ ಸಂಗತಿ. ಆದರೆ ಆರಂಭದಲ್ಲಿ ದೇಸಿರಿಯ ಅಡುಗೆ ಎಣ್ಣೆಯ ಬೆಲೆಯನ್ನು ಪ್ರಶ್ನಿಸಿದವರು, ನಂತರದ ದಿನಗಳಲ್ಲಿ ಮೆಚ್ಚಿಕೊಂಡಿದ್ದಾರೆ.

ಈ ಮೂವರ ಸಾಧನೆಗೆ ಕುಟುಂಬವೂ ಬೆನ್ನೆಲುಬಾಗಿ ನಿಂತಿದೆ. ಯುವಕರೇ ದೇಶದ ಆಸ್ತಿ ಎನ್ನುವುದಕ್ಕೆ ಸಹಜ ಕೃಷಿ, ರಾಸಾಯನಿಕ ರಹಿತ ಉತ್ಪನ್ನ, ಗ್ರಾಮಗಳಲ್ಲಿ ಉದ್ಯೋಗ ಸೃಷ್ಟಿಗೆ ಮುಂದಾಗಿರುವ ಮಹೇಶ್, ನವೀನ್ ಹಾಗೂ ಯೋಗೀಶ್‌ರಂತಹ ಯುವಕರೇ ಸ್ಪಷ್ಟ ಸಾಕ್ಷಿ.






"ಮೂವರೂ ಸಮಾನಮನಸ್ಕರಾಗಿರುವುದರಿಂದ ನಮ್ಮ ಯೋಚನೆಗಳು, ದಿಕ್ಕು ಒಂದೇ ಆಗಿದ್ದು ಸಮಾಜದ ಸ್ವಾಸ್ಥ್ಯಕ್ಕೆ ಕೆಲಸ ಮಾಡುತ್ತಿರುವುದು ತೃಪ್ತಿ ತಂದಿದೆ. ಲಕ್ಷಗಟ್ಟಲೆ ಸಂಬಳ ತೆಗೆದುಕೊಳ್ಳುವಾಗಲೂ ಈ ಆತ್ಮತೃಪ್ತಿ ಲಭಿಸಿರಲಿಲ್ಲ. ಕೃಷಿಕ ಕುಟುಂಬದಿಂದ ಬಂದವರಾಗಿರುವುದರಿಂದ ಹಳ್ಳಿಗಳ ಸ್ಥಿತಿಗತಿಗಳ ಅರಿವಿದೆ. ಹಾಗಾಗಿ ಡಾ. ಖಾದರ್ ಹೇಳುವಂತೆ, ಹಳ್ಳಿಯ ಹಣ ಹಳ್ಳಿಯಲ್ಲೇ ಉಳಿಯಲಿ, ಪಟ್ಟಣದ ಹಣ ಹಳ್ಳಿಗೆ ಹರಿದು ಬರಲಿ. ಇದಕ್ಕೆ ಪೂರಕವಾಗಿ ನಾವು ಸ್ಥಾಪಿಸಿರುವ ದೇಸಿರಿಯ ಮೂಲಕ ನಮ್ಮ ಕನಸನ್ನು ನನಸಾಗಿಸುತ್ತೇವೆ ಎಂಬ ಅಚಲ ನಂಬಿಕೆ ನಮಗಿದೆ.

-ಯೋಗೇಶ್.ಎನ್



"ನಾನು ನಾಲ್ಕು ವರ್ಷದಿಂದ ಕೃಷಿ ಆರಂಭಿಸಿದೆ. ಕೃಷಿಯಲ್ಲಿ ರಾಸಾಯನಿಕ ಮುಕ್ತವಾಗಿ ಮಾಡುವುದರಿಂದ ಲಾಭ ಬರಲು ಆರಂಭವಾಯಿತು. ಸಾವಯವ ಕೃಷಿಯ ಪ್ರಯೋಜನವನ್ನು ನಾನು ಕಂಡುಕೊಂಡೆ. ನಗರಗಳಿಂದ ಹಳ್ಳಿಗೆ ಜನ ತೆರಳುವಂತೆ ಮಾಡಲು ಏನನ್ನಾದರೂ ಮಾಡಬೇಕು ಎಂಬುದು ನನ್ನ ಕನಸಾಗಿತ್ತು. ಒಂದೇ ಮನಸ್ಥಿತಿಯುಳ್ಳ ಸ್ನೇಹಿತರು ಸೇರಿ ಈ ಕಾರ್ಯಕ್ಕೆ ಮುಂದಾದೆವು. ಹಳ್ಳಿಗಳಿಗೆ ದುಡ್ಡು ಹರಿದು ಬರಬೇಕು. ಉದ್ಯೋಗ ಸೃಷ್ಟಿಯಾಗಬೇಕು. ದೇಸಿ ಎತ್ತುಗಳು ಉಳಿಯಬೇಕು. ಈ ಮೂಲಕ ನಮ್ಮ ಬದುಕಿಗೂ ಒಂದು ದಾರಿಯನ್ನು ಕಂಡುಕೊಳ್ಳಬೇಕೆಂದು ಈ ದೇಸಿರಿ ಸಂಸ್ಥೆಯನ್ನು ಸ್ಥಾಪಿಸಿದೆವು.

- ನವೀನ್ ಕುಮಾರ್



"ಉದ್ಯೋಗದ ಹೊರತಾಗಿ ನಾಲ್ಕು ಜನರಿಗೆ ಸಹಾಯ ವಾಗುವಂತದ್ದು ಏನಾದರೂ ಮಾಡಬೇಕು ಎಂದಾಗ ನಮಗೆ ಹೊಳೆದದ್ದು ಕೃಷಿ ಕ್ಷೇತ್ರ. ಅದಕ್ಕೋಸ್ಕರ ಮೂವರೂ ಸೇರಿ ರಾಸಾಯನಿಕ ರಹಿತ ಅಡುಗೆ ಎಣ್ಣೆ ತಯಾರಿಗೆ ಮುಂದಾದೆವು. ಸಾಂಪ್ರದಾಯಿಕ ಪದ್ಧತಿಯಲ್ಲಿದ್ದ ಉತ್ತಮ ಅಂಶಗಳನ್ನು ಮನಗಂಡು ಗಾಣದಿಂದ ಎಣ್ಣೆ ತೆಗೆಯುವ ನಿರ್ಧಾರಕ್ಕೆ ಬಂದೆವು. ಅದರಲ್ಲಿ ಯಶಸ್ವಿಯೂ ಆಗಿದ್ದೇವೆ. 2020ಕ್ಕೆ ನಾವು ಒಂದು ಲಕ್ಷ ಜನರ ಅಡುಗೆ ರಾಸಾಯನಿಕ ಮುಕ್ತವಾಗಬೇಕೆಂಬ ಕನಸು ನಮ್ಮದು.

- ಮಹೇಶ

## ಸಹಜ ಕೃಷಿಗೆ ಪ್ರೋತ್ಸಾಹ

- 2020ರಲ್ಲಿ 500 ಎಕರೆ ಭೂಮಿಯನ್ನು ರಾಸಾಯನಿಕ ರಹಿತವಾಗಿ ಪರಿವರ್ತಿಸುವುದು
- ನೈಸರ್ಗಿಕ ರೀತಿಯಲ್ಲಿ ಎಣ್ಣೆ ತಯಾರಿಕೆಗೆ ಬಳಕೆಯಾಗುವ ಬೀಜವನ್ನು ಬೆಳೆಯುವುದು.
- ಸಹಜ ಕೃಷಿಗೆ ಒತ್ತು ನೀಡುವಂತ ಕೃಷಿಕರನ್ನು ಗುರುತಿಸುವುದು.
- ರೈತರಿಗೆ ಸಹಜ ಕೃಷಿ ಬಗ್ಗೆ ತಿಳಿವಳಿಕೆ ಮೂಡಿಸುವುದು.

## ಎತ್ತಿನ ಗಾಣ, ದೇಸಿ ತಳಿ

ಹಳೆಯ ತಲೆಮಾರಿನವರ ಬದುಕಿನ ಜತೆಗೆ ತಾಳೆ ಹಾಕಿ ನೋಡಿದಾಗ, ಅವರ ಆನಾರೋಗ್ಯಕ್ಕೆ ಜೀವನಶೈಲಿ ಅಥವಾ ಆಹಾರವಾಗಲಿ ಕಾರಣವಾಗುತ್ತಿರಲಿಲ್ಲ. ಅವರ ದೀರ್ಘಾಯಸ್ಸಿನ ಗುಟ್ಟು ಅಡುಗೆಗೆ ಬಳಸುತ್ತಿದ್ದ ಎಣ್ಣೆಯಾಗಿತ್ತು ಎಂಬುದು ತಿಳಿದು ಬಂತು. ನಂತರ ಸಂಶೋಧನೆ ಮಾಡಿ, ಮೊದಲೆಲ್ಲಾ ಯಾವ ರೀತಿಯ ಆಹಾರ ಬಳಸುತ್ತಿದ್ದರು? ಅಡುಗೆ ಎಣ್ಣೆಯನ್ನು ಯಾವ ರೀತಿ ತಯಾರಿಸುತ್ತಿದ್ದರು ಎಂಬುದನ್ನು ತಿಳಿದುಕೊಂಡರು. ಹಿಂದಿನ ಕಾಲದಲ್ಲಿ ವೃತ್ತಿಪರ ಗಾಣಿಗರಿದ್ದರು. ಅವರ ಕೆಲಸವೇ ಎಣ್ಣೆ ತೆಗೆಯುವುದು. ಹಳ್ಳಿಯಲ್ಲಿ ಒಂದಿಷ್ಟು ಗಾಣಗಳನ್ನು ಹಾಕುತ್ತಿದ್ದರು. ಗಾಣಿಗರೇ ಎಣ್ಣೆ ತೆಗೆದು ಕೊಡುತ್ತಿದ್ದರು. ಇದರಲ್ಲಿ ಯಾವುದೇ ಕಲಬೆರಕೆಗಳಿರಲಿಲ್ಲ. ರಾಸಾಯನಿಕಗಳಿರಲಿಲ್ಲ, ಪ್ರಿಸರ್ವೇಟಿವ್ಸ್ ಹಾಕುತ್ತಿರಲಿಲ್ಲ. ಜನರೆಲ್ಲಾ ಸುಖವಾಗಿ ಇದ್ದರು. ನಮಗೇ ಗೊತ್ತಿಲ್ಲದಂತೆ ನಾವೇ ಬದಲಾವಣೆಗೆ ಮೈ ಒಡ್ಡಿಕೊಂಡೆವು. ಇದರ ಪರಿಣಾಮ ಎಲ್ಲಾ ಕುಲಕಸುಬು, ವೃತ್ತಿಗಳೂ ನಿಂತುಹೋಗಿವೆ. ಇಂತಹ ವೃತ್ತಿಗಳಿಗೆ ಮರುಜೀವ ನೀಡೋಣ ಎಂಬ ಉದ್ದೇಶದಿಂದ ಖುದ್ದಾಗಿ ಒಂದಿಷ್ಟು ಜನರನ್ನು ಹಳೆ ತಲೆಮಾರುಗಳನ್ನು ಭೇಟಿಯಾದರು. ಆ ಸಂದರ್ಭದಲ್ಲೇ ಈ ಎಣ್ಣೆಗಾಣಕ್ಕೆ ಬಳಕೆಯಾಗುತ್ತಿದ್ದ ಎತ್ತುಗಳ ಸಂತತಿ ನಶಿಸಿಹೋಗುತ್ತಿದೆ ಎಂಬ ಸಂಗತಿಯೂ ಇವರ ಗಮನಕ್ಕೆ ಬಂತು. ನಮ್ಮ ದೇಶದಲ್ಲಿದ್ದ ನೂರು ರೀತಿಯ ಎತ್ತಿನ ತಳಿಗಳು 30ರಿಂದ 35ಕ್ಕೆ ಇಳಿದಿವೆ ಎಂಬುದನ್ನು ಮನಗಂಡರು. ಕೃಷಿಕಾರ್ಯದಲ್ಲಿ ಇದರ ಬಳಕೆಯಿಲ್ಲದೆ 65ರಷ್ಟು ತಳಿಗಳು ಪೂರ್ಣವಾಗಿ ನಶಿಸಿದೆ. ಹೀಗಾಗಿ ಈ ಎತ್ತುಗಳನ್ನು ಬಳಸಿ ಎಣ್ಣೆಗಳನ್ನು ತೆಗೆಯುವ ಮೂಲಕ ದೇಸಿ ತಳಿಗಳ ಸಂರಕ್ಷಣೆಗೆ ಮುಂದಾದರು.


ಎತ್ತಿನ ಗಾಣ ಮಾಡುವುದು ಎಂದು ನಿರ್ಧರಿಸಿದಾಗ ಅವರ ಸಹಾಯಕ್ಕೆ ಬಂದದ್ದು ಮಾಳೂರಿನ ಶ್ರೀ ರಾಮಚಂದ್ರಾಪುರ ಮಠ. ಅಲ್ಲಿ ಕೇಳಿಕೊಂಡಾಗ ಎರಡು ಎತ್ತುಗಳನ್ನು ಗಾಣಕ್ಕೆಂದೇ ಕೊಟ್ಟರು. ಕಸಾಯಿ ಖಾನೆಗೆ ಒಯ್ಯುತ್ತಿದ್ದ ಎತ್ತುಗಳನ್ನು ತುಮಕೂರಿನ ಶ್ರೀ ಕೃಷ್ಣ ಗೋಶಾಲೆಯವರು ವಶಪಡಿಸಿಕೊಂಡು ಅದನ್ನು ಇವರ ಸತ್ ಕಾರ್ಯಕ್ಕೆ ಬಳಸಿಕೊಳ್ಳಲು ನೀಡಿದರು.



ನವೀನ್ ಕುಮಾರ್‌ರವರ ಸ್ವಂತ ಊರಾದ ಮೈಸೂರಿನ ಕೆ. ಆರ್ ನಗರದ ಅಡಗನಹಳ್ಳಿಯಲ್ಲಿ ಒಂದು ಎಣ್ಣೆ ಗಾಣವನ್ನು ಶುರುಮಾಡಿದರು. ಕಡಲೆಕಾಯಿ ಎಣ್ಣೆ, ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ, ಹುಚ್ಚೆಳ್ಳೆಣ್ಣೆ ಹೀಗೆ ರಾಸಾಯನಿಕ ಬಳಸದೆ ನೈಸರ್ಗಿಕವಾಗಿ ಬೆಳೆದವುಗಳನ್ನು ಎಣ್ಣೆ ತೆಗೆಯುವುದು. ಆ ಎಣ್ಣೆ ತೆಗೆದು ಮಾರಾಟ ಮಾಡುವುದು. ಇಲ್ಲಿ ಎಣ್ಣೆ ತೆಗೆದು, ಮಾರುಕಟ್ಟೆಗೆ ಬಿಡುವುದಷ್ಟೇ ಕೆಲಸವಲ್ಲ. ಗ್ರಾಹಕರಿಗೆ ಅರಿವು ಮೂಡಿಸುವುದು ಅವರ ಉದ್ದೇಶವಾಗಿತ್ತು. ಗಾಣದಿಂದ ತೆಗೆದ ಎಣ್ಣೆಯಿಂದ ಏನೆಲ್ಲಾ ಪ್ರಯೋಜನ, ನಿಸರ್ಗಕ್ಕೆ ನಾವೆಷ್ಟು ಹತ್ತಿರವಾಗುತ್ತಿದ್ದೇವೆ ಎಂಬ ತಿಳಿವಳಿಕೆಯನ್ನು ಮೂಡಿಸಲು ಮುಂದಾದರು.

## ದೇಸಿರಿಯ ಪಂಚ ಗುರಿ

1. ನೈಸರ್ಗಿಕವಾಗಿ ತಯಾರಾದ ಉತ್ಪನ್ನದ ಬಗ್ಗೆ ಗ್ರಾಹಕರಿಗೆ ಅರಿವು
2. ರಾಸಾಯನಿಕ ರಹಿತ ಬೆಳೆ ಬೆಳೆಯಲು ರೈತರಿಗೆ ಪ್ರೋತ್ಸಾಹ
3. ರೈತರು ಬೆಳೆದಿರುವ ಉತ್ಪನ್ನಕ್ಕೆ ಮಾರುಕಟ್ಟೆ
4. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಸೃಷ್ಟಿ
5. ವಿದ್ಯುತ್ ಉಳಿತಾಯ



## ಗ್ರಾಮಸ್ಥರಿಗೆ ತರಬೇತಿ, ಉದ್ಯೋಗ ಸೃಷ್ಟಿ

ಸುಮಾರು ಮೂರು ವರ್ಷಗಳಿಂದ ಮನಸ್ಸಿನಲ್ಲಿದ್ದ ಯೋಜನೆ ಕಾರ್ಯರೂಪಕ್ಕೆ ಬಂದು ಎಂಟು ತಿಂಗಳು ಕಳೆದಿದೆ. ಈಗಾಗಲೇ ನಾಲ್ಕು ಉತ್ಪನ್ನಗಳನ್ನು ಹೊರತಂದಿದ್ದಾರೆ. ಸ್ಟಾರ್ಟ್ ಅಪ್ ಕಂಪೆನಿಯಾಗಿದ್ದರೂ ಬೆಂಗಳೂರಿನಲ್ಲಿ ಐನೂರು ಗ್ರಾಹಕರು ಇದ್ದಾರೆ. ಕೇವಲ ನಾವು ಮೂರು ಜನರಿಂದ ಇದನ್ನು ಮಾಡಲು ಸಾಧ್ಯವಿಲ್ಲ. ಅದಕ್ಕೋಸ್ಕರ ಪ್ರತೀ ಗ್ರಾಮದ ಕೃಷಿಕರನ್ನು ಇದರಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಉದ್ದೇಶವೂ ಇವರದ್ದು. ಉದ್ಯೋಗವೂ ಸೃಷ್ಟಿಯಾಗುತ್ತದೆ. ಗ್ರಾಮೀಣ ಜನರಿಗೆ ಈ ಬಗ್ಗೆ ತರಬೇತಿ ನೀಡಿ ಅವರನ್ನು ತಯಾರು ಮಾಡಿದಾಗ ಗ್ರಾಹಕರ ಬೇಡಿಕೆಗೆ ತಕ್ಕಂತೆ ಉತ್ಪನ್ನವನ್ನು ತಲುಪಿಸಬಹುದು. ನಗರದಿಂದ ಹಳ್ಳಿಗೆ ಹಣದ ಹರಿವು ಸಾಧ್ಯ. ಈ ರೀತಿಯ ಉದ್ಯಮ ಬೆಳೆಸಬೇಕೆಂಬ ಕನಸು, ಪರಿಕಲ್ಪನೆ ಹೊಂದಿದದಾರೆ. ಅದಕ್ಕೆ ತಕ್ಕನಾಗಿ ಗ್ರಾಹಕರಿಂದ ಬೇಡಿಕೆ ಇದೆ. ಜನರು ಉತ್ಪನ್ನವನ್ನು ಇಷ್ಟಪಟ್ಟಿದ್ದಾರೆ.

ಕೇವಲ ವ್ಯವಸಾಯ, ಉತ್ಪನ್ನ ತಯಾರಿ ಮಾರುಕಟ್ಟೆಯಷ್ಟೇ ಅಲ್ಲದೆ ದೇಶೀ ಎತ್ತಿನ ತಳಿಗಳನ್ನು ಉಳಿಸಬೇಕೆಂಬ ಸದುದ್ದೇಶವೂ ಇದರ ಹಿಂದಿದೆ. 'ಹಳ್ಳಿಗಳಲ್ಲಿರುವ ಯುವಜನರಿಗೆ ಉದ್ಯೋಗ ಸೃಷ್ಟಿಯಾದರೆ, ಅವಕಾಶಗಳು ಲಭಿಸಿದರೆ, ಕೃಷಿಕರು ಬೆಳೆದ ಬೆಳೆಗಳಿಗೆ ಮಾರುಕಟ್ಟೆ, ಎಣ್ಣೆಗಾಣಕ್ಕೆ ಎತ್ತುಗಳನ್ನು ಮತ್ತೆ ಬಳಸಲು ಆರಂಭಿಸುವ ಮೂಲಕ ದೇಸೀ ತಳಿಗಳನ್ನು ಉಳಿಸಿದಂತಾಗುತ್ತದೆ' ಎನ್ನುತ್ತಾರೆ ಈ ಮೂವರು.